

ಶಿಕಾರಿ ನಡೆಯುತ್ತಿದ್ದು, ಯಾರಲ್ಲೂ ಅದರ ಬಗ್ಗೆ ಪಾಪ ಪ್ರಜ್ಞೆ ಕಾಡುತ್ತಿರಲಿಲ್ಲ.

ಅಂದು ಬಾಲ್ಯದಲ್ಲಿ ಕೇಳುತ್ತಿದ್ದ ಕುಟುರನ ಕೂಗು ಇಂದು 30 ವರ್ಷಕ್ಕೂ ಮೀರಿದ ಪಶ್ಚಿಮ ಘಟ್ಟದಲ್ಲಿನ ನನ್ನ ವಾಸ್ತವ್ಯದಲ್ಲಿ, ಜೀವನದ ಅವಿಭಾಜ್ಯ ಅಂಗವಾಗಿ ಹೋಗಿದೆ. ಮಲೆನಾಡಿನ ಮಹಾ ಅರಣ್ಯಗಳನ್ನು ಕಲ್ಪಿಸಿಕೊಳ್ಳಲು ಜೀರುಂಡೆಗಳ ಜೀರ್ದನಿ ಹೇಗೆ ಸಂಕೇತವೊ, ಅದೇ ರೀತಿ ನಿತ್ಯಹರಿದ್ವರ್ಣದ ಕಾಡುಗಳಿಗೆ ಕುಟುರನ ಕೂಗು ಸಂಕೇತ.

ಈ ಕುಟುರನ ಕೂಗನ್ನು ಚಲನಚಿತ್ರದ ಹಿಮ್ಮೇಳದಲ್ಲಿ ಬಳಸಿಕೊಳ್ಳುವಲ್ಲಿ ಹೆಸರಾಂತ ಸಂಗೀತ ನಿರ್ದೇಶಕರಾದ ಇಳಯರಾಜ ಅಗ್ರಗಣ್ಯರು. ಕಾಡಿನ ದೃಶ್ಯವಾಗಲಿ, ಹೊಲಗದ್ದೆಯ ಚಟುವಟಿಕೆಯಾಗಲಿ ಸಿನಿಮಾದಲ್ಲಿ ಬಂದಾಗ ಆ ದೃಶ್ಯಕ್ಕೆ ತಕ್ಕಂತೆ ಕುಟುರನ ಕೂಗನ್ನು ಸೇರಿಸಿ ಆ ಚಲನಚಿತ್ರ ನೋಡುವವರಿಗೆ ಬಾಲ್ಯದ, ಹಳ್ಳಿಯ ಒಡನಾಟದ, ಅನುಭವ ಮೆಲುಕು ಹಾಕುವ ಅವಕಾಶ ಅವರ ಚಿತ್ರಗಳಲ್ಲಿ ಹೆಚ್ಚು.

ದಕ್ಷಿಣ ಭಾರತದಲ್ಲಿ 4 ಪ್ರಭೇದದ ಕುಟುರಗಳಿವೆ. ಅದರಲ್ಲಿ ಮಲಬಾರ್ ಬಾರ್ಬೆಟ್ ಮತ್ತು ಬ್ರೌನ್ ಹೆಡೆಡ್ ಬಾರ್ಬೆಟ್ ಪಶ್ಚಿಮ ಘಟ್ಟಕ್ಕೆ ಸೀಮಿತವಾಗಿದೆ. ಉಳಿದ ಎರಡು ಪ್ರಭೇದ ಸೊಪ್ಪು ಕುಟುರ (ವೈಟ್ ಚೀಕೆಡ್ ಬಾರ್ಬೆಟ್) ಹಾಗೂ ಕಂಚು ಕುಟುರ (ಕಾಪರ್ ಸ್ಮಿತ್ ಬಾರ್ಬೆಟ್) ಎಲ್ಲಾ ಕಡೆಯೂ ಕಾಣಸಿಗುತ್ತದೆ. ಯಾವುದೇ ಅತ್ತಿ, ಆಲ, ಬಸರಿ ಹಣ್ಣಿನ ಮರಕ್ಕೆ ಹಣ್ಣಾದ ಕೂಡಲೇ ಗುಂಪಾಗಿ ಬಂದು ಮುತ್ತಿಗೆ ಹಾಕುತ್ತವೆ. ಕಾಫಿ, ಏಲಕ್ಕಿ ಎಸ್ಟೇಟಿನ ಹಣ್ಣಿನ ಮರದಲ್ಲೂ ಇವುಗಳನ್ನು ಕಾಣಬಹುದು. ಹಣ್ಣುಗಳು, ಹೂ ಮಕರಂದ, ಕೀಟಗಳು ಇವುಗಳ ಮುಖ್ಯ ಆಹಾರ.



ಕರ್ನಾಟಕ ರಾಜ್ಯೋತ್ಸವ ವಿಶೇಷ ಪಕ್ಷಿ ಕಂಚು ಕುಟುರ (ಕಾಪರ್ ಸ್ಮಿತ್ ಬಾರ್ಬೆಟ್). ಕನ್ನಡ ಬಾವುಟದ ಕೆಂಪು ಮತ್ತು ಹಳದಿ ಎರಡೂ ಬಣ್ಣಗಳನ್ನು, ಅಂದರೆ ಅಚ್ಚ ಅರಿಶಿಣ ಮತ್ತು ಕುಂಕುಮದ ಬಣ್ಣವನ್ನು ಇವು ಹೊಂದಿವೆ. ಹಣೆಯಲ್ಲಿ ಮತ್ತು ಎದೆಯಲ್ಲಿ ಕೆಂಪು ಬಣ್ಣವಿದ್ದರೆ, ಕಣ್ಣಿನ ಸುತ್ತ ಇರುವ ಕೆಂಪು ಉಂಗುರ, ಕಪ್ಪು ಗಲ್ಲ, ಹಳದಿ ಕೆನ್ನೆ, ಪೂರ್ತಿ ಗಂಟಲಿಗೆ ಅರಿಶಿಣ ಲೇಪನ ಮಾಡಿದಂತೆ ತೋರುತ್ತೆ. ಇದರ ಕೊಕ್ಕು ಕಪ್ಪು.

ವೈಟ್ ಚೀಕೆಡ್ ಬಾರ್ಬೆಟ್‌ನ ತಲೆ, ನೆತ್ತಿ ಮತ್ತು ಎದೆ ಬಿಳಿಗೀರುಗಳಿಂದ ಕೂಡಿದ್ದು ಕಂದು ಬಣ್ಣವಿರುತ್ತದೆ. ಇದರ ಕಪಾಲದಲ್ಲಿ ಬಿಳಿಯ ಮಚ್ಚೆ ಇರುತ್ತದೆ. ಕಣ್ಣಿನ ಸುತ್ತ ಇರುವ ನಗ್ನ ಕಪ್ಪು ಉಂಗುರದಿಂದ ಇದನ್ನು ಗುರುತಿಸಲು ಸಾಧ್ಯ. ಬಿಳಿಯ ಗಲ್ಲ, ಬೆನ್ನ ಮೇಲೆ ಕಂದು ಗೀರುಗಳು . ಕುಟರ..ರ..... ಕುಟ್ರೂ... ಕುಟ್ರೂ ಎನ್ನುವ ಇದರ ಕೂಗು ಚಿರಪರಿಚಿತ.

ಬ್ರೌನ್ ಹೆಡೆಡ್ ಬಾರ್ಬೆಟ್‌ನ ರೆಕ್ಕೆ, ಬಾಲದ ಪುಕ್ಕ ಎಲ್ಲವೂ ಹಸಿರು ಬಣ್ಣ. ಕಂದು ತಲೆ, ಕತ್ತು, ಬೆನ್ನು, ಎದೆಯಲ್ಲಿ ಬಿಳಿಗೀರುಗಳು. ಕಣ್ಣಿನ ಸುತ್ತ ಕಿತ್ತಳೆ ಬಣ್ಣದ ಉಂಗುರ ಇರುತ್ತದೆ. ಇದರ ಕೂಗು ಕುಟರ..ರ..ಉಟ್ರೂ... ಉಟ್ರೂ... ಹುಹುಹು!

ಮಲಬಾರ್ ಬಾರ್ಬೆಟ್ ಕೆಂಪು ಕತ್ತಿನ ಕಂಚು ಕುಟಿಗನ ನೆತ್ತಿಯಲ್ಲಿ, ಕಣ್ಣಿನ ಸುತ್ತ ಇರುವ ಉಂಗುರ, ಗಂಟಲು ಹಾಗೂ ಎದೆಯ ತುದಿ ಕೆಂಪುಬಣ್ಣದಿಂದ ಕೂಡಿರುತ್ತದೆ. ಮುಖವನ್ನು ಥೇಟ್ ಕುಂಕುಮದಲ್ಲಿ ಅದ್ದಿ ತೆಗೆದಂತೆ ಕಾಣುತ್ತದೆ. ಕಪಾಲ ಪೂರ್ತಿ ತಿಳಿನೀಲಿ ಬಣ್ಣದಿಂದ ಕಂಗೊಳಿಸುತ್ತದೆ. ಇದರ ಕೊಕ್ಕು ಕಪ್ಪು.

ಈ ನಾಲ್ಕೂ ಪ್ರಭೇದಗಳಲ್ಲಿ ಕೆಲವೊಂದು ಸಮಾನ ಅಂಶಗಳಿವೆ. ಮಲಬಾರ್ ಬಾರ್ಬೆಟ್ ಮತ್ತು ಕಂಚು ಕುಟಿಗ (ಕಾಪರ್ ಸ್ಮಿತ್ ಬಾರ್ಬೆಟ್)ಗಳ ಕೊಕ್ಕು ಕಪ್ಪು ಬಣ್ಣದಿಂದ ಕೂಡಿರುತ್ತದೆ. ಆದರೆ ದೊಡ್ಡ ಸೊಪ್ಪುಕುಟುರ (ಬ್ರೌನ್ ಹೆಡೆಡ್ ಬಾರ್ಬೆಟ್)ಮತ್ತು ಸಣ್ಣ ಸೊಪ್ಪುಕುಟುರ (ವೈಟ್ ಚೀಕೆಡ್ ಬಾರ್ಬೆಟ್) ಗಳ ಕೊಕ್ಕು ತಿಳಿ ಗುಲಾಬಿ ಬಣ್ಣದ್ದು.

ದೊಡ್ಡ ಸೊಪ್ಪುಕುಟುರ (ಬ್ರೌನ್ ಹೆಡೆಡ್ ಬಾರ್ಬೆಟ್), ಸಣ್ಣ ಸೊಪ್ಪುಕುಟುರ (ವೈಟ್ ಚೀಕೆಡ್ ಬಾರ್ಬೆಟ್) ಇವೆರಡರ ಕೂಗು ಒಂದೇ ತರಹ ಇದೆ. ಕಂಚು ಕುಟಿಗ (ಕಾಪರ್ ಸ್ಮಿತ್ ಬಾರ್ಬೆಟ್) ಮತ್ತು ಕೆಂಪು ಕತ್ತಿನ ಕಂಚು ಕುಟಿಗ (ಮಲಬಾರ್ ಬಾರ್ಬೆಟ್) ಇವೆರಡರ ಕೂಗು ಅನುಕ್ರಮವಾಗಿ ಟಂಕ್... ಟಂಕ್.. ಹಾಗೂ ಪುಕ್..ಪುಕ್.. ಎಂದು ಕಮ್ಮಾರನು ಪಾತ್ರೆ ಕುಟ್ಟುವ ರೀತಿ ಕೇಳಿಸುತ್ತದೆ.

ಅದರಲ್ಲೂ ಈ ಮಲಬಾರ್ ಬಾರ್ಬೆಟ್‌ನ ಕೂಗಲ್ಲಿ ನಗು ತರಿಸುವ ಅಂಶವೊಂದಿದೆ. ಮಲಬದ್ಧತೆಯಿಂದ ನರಳುವ ರೋಗಿಯ ತರಹ, ಬಾಯಿ ಮುಚ್ಚಿ ಪೃಷ್ಠ ಭಾಗವನ್ನು ತಿಣುಕುತ್ತಾ ಕೆಳಕ್ಕೆ ಒತ್ತಿ ಪುಕ್..ಪುಕ್.. ಎಂದು ನಿಮಿಷಕ್ಕೆ 100ಕ್ಕೂ ಹೆಚ್ಚು ಸಲ ಕೂಗುತ್ತದೆ!

ಎಲ್ಲಾ ನಾಲ್ಕು ಪ್ರಭೇದದ ಹಕ್ಕಿಗಳಲ್ಲೂ ಪ್ರಮುಖವಾಗಿ ಎಲೆ ಹಸಿರು ಬಣ್ಣದ ದೇಹವಿದೆ. ಎಲೆಗಳ ಮಧ್ಯೆ ಕುಳಿತಾಗ ಕಣ್ಣಿಗೆ ಕಾಣಿಸದಂತೆ ಮರೆಮಾಚುವ ಬಣ್ಣ. ತುಸು ಬಾಗಿದ ದಪ್ಪನೆಯ ಕೊಕ್ಕು, ಕೊಕ್ಕಿನ ಬುಡದಲ್ಲಿ ಉದ್ದನಾದ ದಪ್ಪ ಮೀಸೆ, ಗಟ್ಟಿಮುಟ್ಟಾದ ಸಣ್ಣ ಕಾಲುಗಳು. ಆ ಬೆರಳಲ್ಲಿ ಎರಡು ಬೆರಳು ಮುಂಬದಿ ಇದ್ದರೆ ಮತ್ತೆರಡು ಹಿಂಬದಿಯಲ್ಲಿ ಹಿಡಿದಿರುತ್ತದೆ. ಗುಂಡು ಗುಂಡಾದ ರೆಕ್ಕೆಗಳು. ಚಿಕ್ಕ ಬಾಲ. ಕುಟುರಗಳು ಹಣ್ಣಿರುವ ಮರದಲ್ಲಿ ಗುಂಪು ಗುಂಪಾಗಿ ಬಂದು ಔತಣ ಕೂಟವನ್ನೇ ನಡೆಸುತ್ತವೆ. ಕೊಕ್ಕು, ನೆತ್ತಿ, ಕೊಕ್ಕಿನ ಬುಡದಲ್ಲಿರುವ ಕೂದಲಲ್ಲಿ ಪರಾಗಗಳು ಅಂಟಿಕೊಂಡು, ಪರಾಗಸ್ಪರ್ಶ ಕ್ರಿಯೆಯಲ್ಲೂ ಪ್ರಮುಖ ಪಾತ್ರ ವಹಿಸುತ್ತವೆ. ■

